# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.24 ರ ಹೆಚ್.ಬಿ.ಆರ್ ಲೇಔಟ್‌ಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 21.11.2020 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

1. ಶ್ರೀ.ಹೆಚ್.ವಿ.ನರೇಂದ್ರ ಕುಮಾರ್, ADTP (North) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
2. ಶ್ರೀ.ಎಸ್.ರಾಜನ್, ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ. 24
3. ಶ್ರೀ. ಉಮೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು ವಾ-24
4. ಶ್ರೀ.ಬಿ.ಎನ್.ಗೋಪಾಲ್, ಕೆಲಸ ಪರಿವೀಕ್ಷಕರು ವಾರ್ಡ್ ಸಂಖ್ಯೆ.24
5. ಶ್ರೀ.ಅರುಣ, ಕಿರಿಯ ಅಭಿಯಂತರರು, ಬೆಸ್ಕಾಂ
6. ಶ್ರೀ.ಮೊಹಮದ್ ಇಬ್ರಾಹಿಮ್, ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಾ-24,
7. ಶ್ರೀ.ವಿಲಿಯಮ್ (ಮಾರ್ಷಲ್) ವಾ-24,
8. ಶ್ರೀ.ವಿಕ್ರಂ.ಎಂ.ವಿ,
9. ಶ್ರೀ.ಯಾಸಿನ್,
10. ಶ್ರೀ.ಶಾಜಿ ಕುನ್ನತ್,
11. ಶ್ರೀ.ಮದನ್ ಪ್ರಸಾದ್,
12. ಶ್ರೀಮತಿ.ಲತಾ ಗಣೇಶ್,
13. ಶ್ರೀಮತಿ.ಶಶಿರೇಖಾ

ಈ ಸಭೆಗೆ ಹಾಜರಿದ್ದ ಮೇಲ್ಕಂಡ ಅಧ್ಯಕ್ಷರು, ಸದಸ್ಯರು ಹಾಗೂ ವಾರ್ಡ್ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿಗಳು ರವರನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ಶ್ರೀಮತಿ.ಶಶಿರೇಖಾ ರವರು ಮಾತನಾಡುತ್ತಾ** ಹೆಚ್.ಬಿ.ಆರ್ ಲೇಔಟ್‌ನ 3ನೇ ಬ್ಲಾಕ್ 5ನೇ ಮುಖ್ಯ ರಸ್ತೆಯಲ್ಲಿ ಕುಡಿಯುವ ನೀರಿನ್ನು ಕಳೆದ ಸುಮಾರು ತಿಂಗಳಿಂದ ಸರಿಯಾಗಿ ಬರುತ್ತಿಲ್ಲ, ಇನ್ನು ಮುಂದೆ ವಾರಕ್ಕೆ ಎರಡು ಬಾರಿ ಕುಡಿಯುವ ನೀರು ಬಿಡಬೇಕು, ಆದರಿಂದ ಇಲ್ಲಿ ಇರುವ ಜನರಿಗೆ ತುಂಬ ಅನುಕೂಲವಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು.

**ಶ್ರೀಮತಿ. ಲತಾ ಗಣೇಶ್, ರವರು ಮಾತನಾಡುತ್ತಾ** ಹೆಚ್.ಬಿ.ಆರ್ ಲೇಔಟ್‌ನ 4ನೇ ಬ್ಲಾಕ್‌ನಲ್ಲಿ ಪಾರ್ಕಿನಲ್ಲಿ ಬೀದಿ ದೀಪಗಳನ್ನು ಹಾಳಾಗಿದ್ದು ಅದನ್ನು ಸರಿಪಡಿಸಬೇಕು, ಸಿ.ಸಿ.ಕ್ಯಾಮರ ಅಳವಡಿಸಬೇಕು, 5ನೇ ''ಎ'' ಮುಖ್ಯರಸ್ತೆಯಲ್ಲಿ ಹೊಸದಾಗಿ ಕಲ್‌ವರ್ಟ್ ಹಾಗೂ ಚರಂಡಿಯನ್ನು ನಿರ್ಮಿಸಬೇಕು, ರಸ್ತೆ ಗುಂಡಿಗಳನ್ನು ಮುಚ್ಚಬೇಕು, ಬಿ.ಡಿ.ಎ ಖಾಲಿ ನಿವೇಶನಗಳಲ್ಲಿ ಬೆಳೆದಿರುವ ಗಿಡ ಮರಗಳನ್ನು ತೆರೆವುಗೊಳಿಸಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು.

**ಶ್ರೀ.ಮದನ್ ಪ್ರಸಾದ್ ರವರು ಮಾತನಾಡುತ್ತಾ** ವಾರ್ಡಿನ 2ನೇ ಬ್ಲಾಕ್ ಸ್ವಾಮಿ ವಿವೇಕಾನಂದ ರಸ್ತೆಯ ಪಾದಚಾರಿ ಮಾರ್ಗ ಕಾಮಗಾರಿಯನ್ನು ತುಂಬ ಚೆನ್ನಾಗಿ ಅಭಿವೃದ್ಧಿ ಮಾಡುತ್ತಿದ್ದಾರೆ, ಪ್ರಸ್ತುತ ಪ್ರಗತಿಯಲ್ಲಿರುವ, ಮಂಜೂರಾಗುವ, ಬಾಕಿ ಉಳಿದಿರುವ ಕಾಮಗಾರಿಗಳ ವಿವರ ನೀಡಬೇಕು, ವಾರ್ಡ್ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳಲ್ಲಿ ಬೀದಿ ದೀಪಗಳನ್ನು ಸರಿಪಡಿಸಬೇಕು, 5ನೇ ಬ್ಲಾಕಿನ 5ನೇ, 6ನೇ, 7ನೇ ಮುಖ್ಯ ರಸ್ತೆಗಳಲ್ಲಿ ಮಳೆ ಬಂದಾಗ ಚೇಂಬರ್ ತುಂಬಿ ನೀರು ಹೊರಗಡೆ ಬರುತ್ತದೆ ಇದನ್ನು ಸರಿಪಡಿಸಬೇಕು, 1ನೇ ಮುಖ್ಯರಸ್ತೆ ನರೇಂದ್ರ ಟೆಂಟ್‌ರಿಂದ ಹೆಣ್ಣೂರು ಮುಖ್ಯರಸ್ತೆ ವರೆಗು ವಾಣಿಜ್ಯ ಮಳಿಗೆಗಳ ವ್ಯಾಪರ ಪರವಾನಗಿ ಪರಿಶೀಲಿಸಬೇಕು, ವಾರ್ಡಿನಲ್ಲಿ ಪೌರ ಕಾರ್ಮಿಕರು ತುಂಬ ಸಮಸ್ಯೆವಿದ್ದು, ಕನಿಷ್ಟಪಕ್ಷ

ವಾರಕ್ಕೆ ಒಂದು ಬಾರಿ ರಸ್ತೆಯನ್ನು ಸ್ವಚ್ಛಗೊಳಿಸಿ, ಯಾಸಿನ್ ನಗರದ ಪಕ್ಕದಲ್ಲಿರುವ ಸರ್ವಿಸ್ ರಸ್ತೆಯಲ್ಲಿ ಕಾರ್ ವಾಷಿಂಗ್ ಸ್ಟೇಷನ್ ನಡೆಸುತ್ತಿದ್ದಾರೆ, ಇವರು ರಸ್ತೆಯಲ್ಲಿ ಗಾಡಿಗಳನ್ನು ನಿಲ್ಲಿಸಿ ಅಕ್ಕಪಕ್ಕದಲ್ಲಿರುವ ಸಾರ್ವಜನಿಕರಿಗೆ ಓಡಾಡಲು ತುಂಬ ತೊಂದರೆಯಾಗುತ್ತದೆ, ಮುಂದಿನ ವರ್ಷದಿಂದ ಕಸ ಸಂಗ್ರಹಣೆಗಾಗಿ ಪ್ರತಿ ಮನೆಗು ತಿಂಗಳಿಗೆ ರೂ.200 ಸಂಗ್ರಹರಣೆ ಮಾಡುವುದಾಗಿ ಮಾಹಿತಿ ದೊರಕಿದ್ದು ಸಂಗ್ರಹಣೆ ಮಾಡಲು ಬಿಡುವಿದಿಲ್ಲ, ಪ್ರಮುಖವಾಗಿ ಈ ಎರಡು ಜಂಕ್ಷನ್‌ಗಳಲ್ಲಿ ಹೆಚ್.ಪಿ. ಪೆಟ್ರೋಲ್ ಬಂಕ್ ಹಾಗೂ ರಾಮ ಮಂದಿರ ವೃತ್ತದಲ್ಲಿ ಟ್ರಾಫಿಕ್ ಸಿಗ್ನಲ್ ಮಂಜೂರಾತಿಯಾಗಿದ್ದು ಸಂಬಂದಪಟ್ಟ ಇಲಾಖೆಯವರು ಕೂಡಲೇ ಅಳವಡಿಸಬೇಕು ಮತ್ತು ಸರ್ವಿಸ್ ರಸ್ತೆಯಲ್ಲಿ ರಾತ್ರಿ ಸಮಯ ಕಸವನ್ನು ಹಾಕುತ್ತಾರೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು.

**ಶ್ರೀ.ರಫಿಕ್ ರವರು ಮಾತನಾಡುತ್ತಾ** ವಾರ್ಡಿನ 5ನೇ ಬ್ಲಾಕ್ ಸರ್ವಿಸ್ ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಿಸಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು.

**ಶ್ರೀ.ವಿಕ್ರಂ ರವರು ಮಾತನಾಡುತ್ತಾ** ವಾರ್ಡ್ ಕಮಿಟಿ ಸಭೆಗೆ ಸಂಬಂದಪಟ್ಟ ಅಧಿಕಾರಿಗಳು ಸಭೆಗೆ ಗೈರಾಜುಯಾದರೆ ಉನ್ನತ ಮಟ್ಟದ ಅಧಿಕಾರಿಗಳಿಗೆ ತಿಳಿಸಬೇಕು, 3ನೇ ಬ್ಲಾಕ್ 6ನೇ ಮುಖ್ಯರಸ್ತೆ 9ನೇ ಅಡ್ಡರಸ್ತೆಯ ಪಾರ್ಕ್ ಹಿಂಭಾಗದಲ್ಲಿ ಕಸವನ್ನು ಹಾಕುತ್ತಾರೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು.

**ನೋಡಲ್ ಅಧಿಕಾರಿ ರವರು ಮಾತನಾಡುತ್ತಾ** ವಾರ್ಡಿನಲ್ಲಿ ಕಸದ ಹೆಚ್ಚು ಸಮಸ್ಯೆವಿದ್ದು ಹಾಗೂ ಪೌರ ಕಾರ್ಮಿಕರ ಸಮಸ್ಯೆವಿದೆ, ಮುಂದಿನ ವಾರ್ಡ್ ಕಮಿಟಿ ಸಭೆಗೆ ವಾರ್ಡಿನ ಸಹಾಯಕ ಕಾರ್ಯನಿರ್ವಾಹಕರಾದ ಶ್ರೀ.ಮತಿ.ಜ್ಯೋತಿರವರು ಹಾಜರಾಗಬೇಕೆಂದು ತಿಳಿಸಿರುತ್ತಾರೆ, ವಾರ್ಡ್ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಬೀದಿ ದೀಪಗಳ ಹಾಳಾಗಿದ್ದು ಅದನ್ನು ಸಹಾಯಕ ಅಭಿಯಂತರರು (ಬೀದಿ ದೀಪ ವಿಭಾಗ) ರವರು ಹಾಜರಾಗಬೇಕೆಂದು ತಿಳಿಸಿರುತ್ತಾರೆ, ಸಭೆಯಲ್ಲಿ ಪ್ರಸ್ತಾಪಿಸಲಾದ ಕುಂದು ಕೊರತೆ ಹಾಗೂ ದೂರುಗಳಿಗೆ ಸ್ಪಂಧಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು, ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ/ ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ.24**
**ಹೆಚ್.ಬಿ.ಆರ್ ಲೇಔಟ್**

**ನೋಡೆಲ್ ಅಧಿಕಾರಿ**
**ವಾರ್ಡ್ ಸಂಖ್ಯೆ.24**
**ಹೆಚ್.ಬಿ.ಆರ್ ಲೇಔಟ್**

<u>ಪ್ರತಿಯನ್ನು</u>

1) ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
2) ಕಾರ್ಯಪಾಲಕ ಅಭಿಯಂತರರು, ಯೋಜನೆ (ಪೂರ್ವ ವಲಯ) ಬಿ.ಬಿ.ಎಂ.ಪಿ
3) ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ ವಲಯ) ಬಿ.ಬಿ.ಎಂ.ಪಿ
4) ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್‌ಬಿ.
5) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೆಸ್ಕಾಂ ಇ-5
6) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೆಸ್ಕಾಂ ಇ-9
7) ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು.ಬಿ.ಬಿ.ಎಂ.ಪಿ
8) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
9) ತೋಟಗಾರಿಕಾ ಅಧೀಕ್ಷಕರು, (ಪೂರ್ವ ವಲಯ)
10) ಆರೋಗ್ಯ ವೈದ್ಯಾಧಿಕಾರಿಗಳು, (ಪೂರ್ವ ವಲಯ)
11) ಕಾಂಟಾಕ್ಟ್ ಟ್ರೇಸಿಂಗ್ ನೋಡಲ್ ಅಧಿಕಾರಿ, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
12) ಹೋಮ್ ಕ್ವಾರೆಂಟೈನ್ ಸ್ಕ್ವಾಡ್ ನೋಡಲ್ ಅಧಿಕಾರಿ, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ

13) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ
14) ಸಹಾಕಯ ಕಂದಾಯ ಅಧಿಕಾರಿ. ಹೆಚ್.ಬಿ.ಆರ್ ಲೇಔಟ್ ಉಪವಿಭಾಗ
15) ಕಲ್ಯಾಣಾದಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
16) ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
17) ಪೋಲಿಸ್ ಇನ್ಸ್‌ಪೆಕ್ಟರ್, ಕೆ.ಜಿ.ಹಳ್ಳಿ
18) ಪೋಲಿಸ್ ಇನ್ಸ್‌ಪೆಕ್ಟರ್,(ಸಂಚಾರಿ), ಕೆ.ಜಿ.ಹಳ್ಳಿ
19) ಕಛೇರಿ ಪ್ರತಿ.